ದಿನಾಂಕ:09/10/2014 ರಂದು ಅಪರಾಹ್ನ 4.00 ಗಂಟೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸಭಾ ಕೊಠಡಿ ಸಂಖ್ಯೆ:313, ವಿಧಾನ ಸೌಧ, ಬೆಂಗಳೂರು ಇಲ್ಲಿ ಜರುಗಿದ ಗಾಂಧೀ ಸಾಕ್ಷಿ ಕಾಯಕ-ತಂತ್ರಾಂಶದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಶ್ರೀ ಟಿ.ಎಂ. ವಿಜಯ ಭಾಸ್ಕರ್, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ಶ್ರೀ ಗಂಗಾರಾಮ್ ಬಡೇರಿಯಾ, ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ, ಬೆಂಗಳೂರು.
3. ಶ್ರೀ ಮುನೀಶ್ ಮೌದ್ಗಿಲ್, ಭಾ.ಆ.ಸೇ., ಆಯುಕ್ತರು (ಗ್ರಾಮೀಣಾಭಿವೃದ್ಧಿ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅಪ ಇಲಾಖೆ, ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
4. ಶ್ರೀ ಕೆ. ಯಾಲಕ್ಕಿ ಗೌಡ, ನಿರ್ದೇಶಕರು (ಪಂ.ರಾಜ್–1), ಗ್ರಾಅಪ ಇಲಾಖೆ, ಬೆಂಗಳೂರು.
5. ಶ್ರೀ ಎಸ್.ಎಂ. ಜುಲ್ಫಿಕರುಲ್ಲಾ, ನಿರ್ದೇಶಕರು (ಪಂ.ರಾಜ್–2), ಗ್ರಾಅಪ ಇಲಾಖೆ, ಬೆಂಗಳೂರು.
6. ಶ್ರೀ ಶ್ರೀಕೃಷ್ಣ ಎನ್. ಬುಗಟ್ಯಾಗೋಳ, ನಿರ್ದೇಶಕರು (ಇ–ಆಡಳಿತ) ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ, ಬೆಂಗಳೂರು.
7. ಶ್ರೀ ಮಹೇಶ್ ಹಿರೇಮಠ್, ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು (ಕೆಆರ್ಆರ್‌ಡಿಎ), ಬೆಂಗಳೂರು.
8. ಶ್ರೀ ಜಗನ್ನಾಥ ರೆಡ್ಡಿ, ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ (ಪಿಆರ್‌ಇಡಿ), ಬೆಂಗಳೂರು.
9. ಶ್ರೀ ಆರ್.ಪಿ. ಕುಲಕರ್ಣಿ, ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
10. ಶ್ರೀ ರತ್ನ ಕುಮಾರ್, ಮುಖ್ಯ ಅಭಿಯಂತರರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್), ಬೆಂಗಳೂರು.
11. ಶ್ರೀ ಕೆ.ಬಿ. ಬಿಜ್ಜಲ್, ಮುಖ್ಯ ಅಭಿಯಂತರರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್), ಬೆಂಗಳೂರು.
12. ಶ್ರೀ ಪ್ರಕಾಶ್, ಜಂಟಿ ನಿರ್ದೇಶಕರು, ಸ್ವಉಕಾ,
13. ಶ್ರೀ ಆರ್. ರಾಜೇಂದ್ರ ಕುಮಾರ್, ತಾಂತ್ರಿಕ ನಿರ್ದೇಶಕರು, ಎನ್‌ಐಸಿ, ಬೆಂಗಳೂರು.

ಆರಂಭದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಮಾನ್ಯ ಸಚಿವರನ್ನು ಮತ್ತು ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ನಂತರ ನಿರ್ದೇಶಕರು (ಇ– ಆಡಳಿತ) ಇವರು **ಗಾಂಧೀ ಸಾಕ್ಷಿ ಕಾಯಕ** ತಂತ್ರಾಂಶದಲ್ಲಿ ದಾಖಲಾಗಿರುವ ಕಾಮಗಾರಿಗಳ ಇಲಾಖಾವಾರು ವೆಚ್ಚದ ವಿವರಗಳನ್ನು ಸಭೆಗೆ ವಿವರಿಸಿದರು. ಈ ಕುರಿತಾಗಿ ವಾಸ್ತವಿಕ ವೆಚ್ಚಗಳೊಂದಿಗೆ ಹೋಲಿಸಿದಾಗ ಇಲಾಖೆಯ ಒಟ್ಟಾರೆ ವೆಚ್ಚದ ಶೇ 20 ರಷ್ಟು ಮಾತ್ರ ತಂತ್ರಾಂಶದಲ್ಲಿ ವಿವರ ದಾಖಲಾಗಿರುವ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು

ಸಭೆಯ ಗಮನಕ್ಕೆ ತಂದರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಮುಖ್ಯ ಅಭಿಯಂತರರು ನಬಾರ್ಡ ಯೋಜನೆಯಡಿ ಶೇ.67.48 , ಸಿ.ಎಂ.ಜಿ.ಎಸ್.ವೈ. ಅಡಿ ಶೇ.5.81, ಸುವರ್ಣ ಗ್ರಾಮೋದಯ ಯೋಜನೆಯಡಿ ಶೇ.51.71, ಹಾಗೂ ಕೆರೆಗಳ ಪುನರುಜ್ಜೀವನ ಯೋಜನೆಯಡಿ ಶೇ.1 ರಷ್ಟು ಮಾಹಿತಿ **ಗಾಂಧೀ ಸಾಕ್ಷಿ ಕಾಯಕ** ತಂತ್ರಾಂಶದಲ್ಲಿ ದಾಖಲಾಗಿರುವ ಕುರಿತು ಸಭೆಯ ಗಮನಕ್ಕೆ ತಂದರು. ಅಲ್ಲದೆ ನೀರು ಸರಬರಾಜು ಯೋಜನೆಯಡಿ ಶೇ.50 ರಷ್ಟು ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಶೇ.83 ರಷ್ಟು ವಿವರ ದಾಖಲಾಗಿರುವುದನ್ನು ಸಭೆಯು ಪರಿಶೀಲಿಸಿತು.

ಇಲಾಖಾವಾರು ಸಮಗ್ರ ವಿವರಗಳನ್ನು ಪರಿಶೀಲಿಸಿದ ನಂತರ ಪ್ರಗತಿಯ ಕುರಿತು ಮಾನ್ಯ ಸಚಿವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈ ಕುರಿತು ನಿರ್ದೇಶಕರು(ಇ-ಆಡಳಿತ) ಇವರು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿದ್ದು ಪ್ರಗತಿಯಾಗದಿರುವುದಕ್ಕೆ ಅವರನ್ನೇ ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆಂದು ತಿಳಿಸಿದರು. ಈ ಕುರಿತು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದರು.

1. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ. ಯೋಜನೆಯ ಅನುದಾನವನ್ನು **ಗಾಂಧೀ** ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಆಗಿರುವ ಪ್ರಗತಿಯ ಆಧಾರದ ಮೇಲೆ ಬಿಡುಗಡೆ ಮಾಡಲು ಹಾಗೂ ಯಾವುದೇ ಪ್ರಗತಿ ಸಾಧಿಸಿರದ ಜಿಲ್ಲೆಗಳಿಗೆ ಅನುದಾನವನ್ನು ಕಡಿತಗೊಳಿಸಲು ಕ್ರಮ ತೆಗೆದುಕೊಳ್ಳುವುದು.
2. ಬ್ಯಾಂಕ್ ಮೂಲಕ ಪಾವತಿಯಾಗುವ ಬಿಲ್ಲುಗಳಿಗೆ ಸಂಬಂಧಿಸಿದಂತೆ ಎಲ್ಲಾ ಬ್ಯಾಂಕುಗಳಿಗೆ ಕಡ್ಡಾಯವಾಗಿ **ಗಾಂಧೀ** ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಸೃಜಿಸಲಾಗಿರುವ ಪಾವತಿ ಆದೇಶವನ್ನು ಪರಿಶೀಲಿಸಿ ಪಾವತಿ ಮಾಡಲು ಸೂಚಿಸುವುದು. ಈ ನಿರ್ದೇಶನ ಪಾಲಿಸದ ಬ್ಯಾಂಕುಗಳಲ್ಲಿನ ಸರ್ಕಾರದ ಠೇವಣಿಯನ್ನು ಹಿಂತೆಗೆದುಕೊಳ್ಳುವುದು.
3. **ಗಾಂಧೀ** ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಬಿಲ್ಲುಗಳು ಸೃಜನೆಯಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸುವುದು ಹಾಗೂ ತಂತ್ರಾಂಶದ ಮೂಲಕವೇ e-FMS ಪದ್ಧತಿಯ ಮೂಲಕ ಯೋಜನೆಗಳ ಬಿಲ್ಲುಗಳು ಪಾವತಿಯಾಗುವಂತೆ ತಂತ್ರಾಂಶವನ್ನು ಎನ್‌ಐಸಿಯು ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳುವುದು.
4. **ಗಾಂಧೀ** ಸಾಕ್ಷಿ ಕಾಯಕ ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಬಳಸುವ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ನಿರ್ಧರಿಸಲು ಅಧಿಕಾರಿಗಳ Brain storming ಸಭೆಯನ್ನು ಏರ್ಪಡಿಸಲು ಕ್ರಮತೆಗೆದುಕೊಳ್ಳುವುದು.
5. ಕೆಆರ್‌ಐಡಿಎಲ್ ದಾಖಲಿಸಿರುವ ಅಂಕಿಅಂಶಗಳು ಅತ್ಯಂತ ಕಡಿಮೆಯಾಗಿದ್ದು ಪೂರ್ಣ ಮಾಹಿತಿಯನ್ನು ದಿನಾಂಕ:20.10.2014 ರೊಳಗೆ ತಂತ್ರಾಂಶಕ್ಕೆ ಅಳವಡಿಸುವುದು. ಈ ಅವಧಿಯ ನಂತರ **ಗಾಂಧೀ** ಸಾಕ್ಷಿ ಕಾಯಕ ತಂತ್ರಾಂಶದ ಹೊರಗೆ ಪಾವತಿ ಮಾಡುವುದನ್ನು ಗಂಭೀರವಾಗಿ ಪರಿಗಣಿಸಲಾಗುವುದೆಂದು ಸಚಿವರು ತಿಳಿಸಿದರು.
6. ಪ್ರಗತಿ ಸಾಧಿಸದ ಹಾಗೂ **ಗಾಂಧೀ** ಸಾಕ್ಷಿ ಕಾಯಕ ತಂತ್ರಾಂಶದ ಹೊರಗೆ ಪಾವತಿ ಮಾಡಿರುವ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ ವಿವರಣೆ ಪಡೆಯುವುದು.

ಅಕ್ಟೋಬರ್ ಅಂತ್ಯದೊಳಗೆ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಸಂಪೂರ್ಣ ಮಾಹಿತಿಯನ್ನು ಕಟ್ಟುನಿಟ್ಟಾಗಿ ಆರೋಹಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವುದು ಹಾಗೂ ಈ ಕುರಿತು ಸರ್ಕಾರದ ಹಂತದಲ್ಲಿ ಸೂಕ್ತ ಮೇಲ್ವಿಚಾರಣೆ ಕ್ರಮಗಳನ್ನು ತೆಗೆದುಕೊಳ್ಳಲು ಸಚಿವರು ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಸಂ:**ಗ್ರಾಅಪ:28/ಗಣಕ ಕೋಶ–2014
**ದಿನಾಂಕ:**13.10.2014

ಮಾನ್ಯ ಗ್ರಾಅಪ ಸಚಿವರಿಂದ ಅನುಮೋದಿತ

(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)
ನಿರ್ದೇಶಕರು (ಇ–ಆಡಳಿತ) ಮತ್ತು
ಸ್ವಉದ್ಯೋಗ ಕಾರ್ಯಕ್ರಮ ಹಾಗೂ
ಪ/ನಿ ಸರ್ಕಾರದ ಉಪ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಶ್ರೀ ಕೆ. ಯಾಲಕ್ಕಿ ಗೌಡ, ನಿರ್ದೇಶಕರು (ಪಂ.ರಾಜ್–1), ಗ್ರಾಅಪ ಇಲಾಖೆ, ಬೆಂಗಳೂರು.
2. ಶ್ರೀ ಜುಲ್ಫಿಕರುಲ್ಲಾ, ನಿರ್ದೇಶಕರು (ಪಂ.ರಾಜ್–2), ಗ್ರಾಅಪ ಇಲಾಖೆ, ಬೆಂಗಳೂರು.
3. ಶ್ರೀ ಶ್ರೀಕೃಷ್ಣ ಎನ್. ಬುಗಟ್ಯಾಗೋಳ, ನಿರ್ದೇಶಕರು (ಇ–ಆಡಳಿತ) ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ, ಬೆಂಗಳೂರು.
4. ಶ್ರೀ ಮಹೇಶ್ ಹಿರೇಮಠ್, ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು (ಕೆಆರ್‌ಆರ್‌ಡಿಎ), ಬೆಂಗಳೂರು.
5. ಶ್ರೀ ಜಗನ್ನಾಥ ರೆಡ್ಡಿ, ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, (ಪಿಆರ್‌ಇಡಿ), ಬೆಂಗಳೂರು.
6. ಶ್ರೀ ಆರ್.ಪಿ. ಕುಲಕರ್ಣಿ, ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
7. ಶ್ರೀ ರತ್ನ ಕುಮಾರ್, ಮುಖ್ಯ ಅಭಿಯಂತರರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್), ಬೆಂಗಳೂರು.
8. ಶ್ರೀ ಕೆ.ಬಿ. ಬಿಜ್ಜಲ್, ಮುಖ್ಯ ಅಭಿಯಂತರರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್), ಬೆಂಗಳೂರು
9. ಶ್ರೀ ಪ್ರಕಾಶ್, ಜಂಟಿ ನಿರ್ದೇಶಕರು, ಸ್ವಉಕಾ,
10. ಶ್ರೀ ಆರ್. ರಾಜೇಂದ್ರ ಕುಮಾರ್, ತಾಂತ್ರಿಕ ನಿರ್ದೇಶಕರು, ಎನ್‌ಐಸಿ, ಬೆಂಗಳೂರು.

**ಪ್ರತಿ:**

1. ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು /ಕಾರ್ಯದರ್ಶಿಗಳು (ಪಂ.ರಾಜ್)/ ಆಯುಕ್ತರು(ಗ್ರಾಮೀಣಾಭಿವೃದ್ಧಿ) ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.